ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 4, September-October 2023, Pp. 7-11
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಮಂಡ್ಯ ನೆಲದ ಅಸ್ಮಿತೆಯ ಪ್ರಮುಖ ರೈತ ಹೋರಾಟಗಳು

**ಡಾ. ಸತೀಶ ಹೆಚ್.ಎನ್[1] ಮತ್ತು ಪವನ ಕುಮಾರ.ಬಿ[2]**

[1]ಉಪನ್ಯಾಸಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಸರ್ಕಾರಿ ಮಹಾವಿದ್ಯಾಲಯ (ಸ್ವಾಯತ್ತ), ಮಂಡ್ಯ.
[2]ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಮೈಸೂರು ವಿಶ್ವವಿದ್ಯಾಲಯ, ಮಾನಸಗಂಗೋತ್ರಿ, ಮೈಸೂರು.

***Abstract:***

*ರೈತ ಚಳುವಳಿಯು ರೈತರ ಹಕ್ಕುಗಳನ್ನು ಪ್ರತಿಪಾದಿಸುವ ಕೃಷಿ ನೀತಿಯೊಂದಿಗೆ ಒಳಗೊಂಡಿರುವ ಸಾಮಾಜಿಕ ಚಳುವಳಿಯಾಗಿದೆ. ಮಾನವ ಇತಿಹಾಸದುದ್ದಕ್ಕೂ ಪ್ರಪಂಚದ ವಿವಿಧ ಪ್ರದೇಶಗಳಲ್ಲಿ ಸಂಭವಿಸಿದ ಹಲವಾರು ರೈತ ಚಳುವಳಿಗಳು ಸುದೀರ್ಘ ಇತಿಹಾಸವನ್ನು ಹೊಂದಿವೆ. ಆರಂಭಿಕ ರೈತ ಚಳುವಳಿಗಳು ಸಾಮಾನ್ಯವಾಗಿ ಊಳಿಗಮಾನ್ಯ ಮತ್ತು ಅರೆ-ಊಳಿಗಮಾನ್ಯ ಸಮಾಜಗಳಾಗಿದ್ದವು ಮತ್ತು ಹಿಂಸಾತ್ಮಕ ದಂಗೆಗಳಿಗೆ ಕಾರಣವಾಯಿತು. ಇತ್ತೀಚಿನ ಚಳುವಳಿಗಳು, ಸಾಮಾಜಿಕ ಚಳುವಳಿಗಳ ವ್ಯಾಖ್ಯಾನಗಳನ್ನು ಅಳವಡಿಸಿಕೊಂಡಿವೆ ಹಾಗೂ ಕಡಿಮೆ ಹಿಂಸಾತ್ಮಕವಾಗಿವೆ ಮತ್ತು ಅವರ ಬೇಡಿಕೆಗಳು ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆಗಳು, ಉತ್ತಮ ಕೂಲಿ ಮತ್ತು ಕೃಷಿ ಕಾರ್ಮಿಕರ ಕೆಲಸದ ಪರಿಸ್ಥಿತಿಗಳು ಮತ್ತು ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದರ ಮೇಲೆ ಕೇಂದ್ರೀಕೃತವಾಗಿವೆ. ಪ್ರಸ್ತುತ ಲೇಖನದಲ್ಲಿ ಮಂಡ್ಯ ಜಿಲ್ಲೆಯ ರೈತ ಹೋರಾಟಗಳನ್ನು ಕುರಿತು ವಿಶ್ಲೇಷಿಸಲಾಗಿದೆ.*

***Keywords:*** *ರೈತರು, ರೈತ ಸಮಸ್ಯೆ, ರೈತ ಹೋರಾಟ, ಚಳುವಳಿ, ಮಂಡ್ಯ.*

## ಪೀಠಿಕೆ

ರೈತರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು, ತಮ್ಮ ಸಮಸ್ಯೆಗಳ ಪರಿಹಾರಕ್ಕೆ ವಿವಿಧ ಮಾರ್ಗಗಳನ್ನು ಅನುಸರಿಸುತ್ತಾರೆ. ಸಮಸ್ಯೆಗಳಿಗೆ ಸರಿಯಾದ ರೀತಿ ಪರಿಹಾರ ಅಥವ ಪ್ರತಿಸ್ಪಂದನೆ ಸಿಗದಿದ್ದಾಗ ಹೋರಾಟದ ಮೂಲಕ ಸಮಸ್ಯೆ ಬಗೆಹರಿಸಲು ಪ್ರಯತ್ನಿಸುತ್ತಾರೆ. ಕರ್ನಾಟಕದ ಪ್ರಮುಖ ಜಿಲ್ಲೆಗಳಲ್ಲಿ ಒಂದಾದ ಮಂಡ್ಯ ಜಿಲ್ಲೆಯಲ್ಲಿಯೂ ಅನೇಕ ಜನಪ್ರಿಯ ಚಳುವಳಿಗಳು ನಡೆದಿವೆ. ರಾಜ್ಯದ ಯಾವುದೇ ಮೂಲೆಯಲ್ಲಿ ರೈತನಿಗೆ ಅನ್ಯಾಯವಾದರೆ ಮೊದಲ ಹೋರಾಟ ನಡೆಯುವುದು ಮಂಡ್ಯದಲ್ಲಿಯೇ ಎನ್ನುವಷ್ಟರ ಮಟ್ಟಿಗೆ ಹೋರಾಟಕ್ಕೆ ಪ್ರಸಿದ್ಧಿಯಾಗಿದೆ.

ಮಂಡ್ಯ ಜಿಲ್ಲೆಯಲ್ಲಿ ಹಲವು ರೈತಪರವಾದ ಚಳುವಳಿಗಳು ಮತ್ತು ಹೋರಾಟಗಳು ನಡೆದು ಜಿಲ್ಲೆಯ ರೈತ ಉಳಿವಿಗೆ ಕಾರಣವಾಗಿದೆ. ಸ್ವಾತಂತ್ರ್ಯ ಪೂರ್ವದಿಂದ ಹಿಡಿದು ಆಧುನಿಕ ಯುಗದವರೆಗೆ ಹಲವು ಚಳುವಳಿಗಳು ಜಿಲ್ಲೆಯ ಜನತೆಯಲ್ಲಿರುವ ಹೋರಾಟ ಹಾಗೂ ಸಾಹಸಿ ಪ್ರವೃತ್ತಿಯನ್ನು ಸಾಂಘೀಕರಿಸಿದೆ. ಮಂಡ್ಯ ಜಿಲ್ಲೆಯಲ್ಲಿ ಅನೇಕ ಚಳುವಳಿ ಹಾಗೂ ಹೋರಾಟಗಳು ನಡೆದಿದ್ದು, ಅವುಗಳಲ್ಲಿ ಅತೀ ಹೆಚ್ಚು ಹೋರಾಟಗಳು ರೈತಪರ

***Please cite this article as:*** ಸತೀಶ ಹೆಚ್.ಎನ್ & ಪವನ ಕುಮಾರ. ಬಿ. (2023). ಮಂಡ್ಯ ನೆಲದ ಅಸ್ಮಿತೆಯ ಪ್ರಮುಖ ರೈತ ಹೋರಾಟಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 2(4), 7–11.

ಹೋರಾಟಗಳೇ ಆಗಿವೇ. ಇಲ್ಲಿ ಅಲ್ಪ ಅವಧಿ ಮತ್ತು ಸುದೀರ್ಘ ಅವಧಿಯಲ್ಲಿ ಆದ ರೈತಪರ ಪ್ರತಿಭಟನೆಗಳಿಗೆ ಲೆಕ್ಕವಿಲ್ಲ. ರೈತರ ಮೇಲೆ ಲಾಠಿ ಪ್ರಹಾರ ಗೋಲಿಬಾರ್ ಕೂಡ ನಡೆದಿದೆ. ಮಂಡ್ಯ ಜಿಲ್ಲೆ ಜನತೆ ಅದರಲ್ಲೂ ವಿಶೇಷವಾಗಿ ರೈತ ಸಮುದಾಯ ಸರ್ಕಾರದ ರೈತ ವಿರೋಧಿ ನಿಲುವಿಗೆ ಸಿಲುಕಿ ನರಳುತ್ತಿದೆ. ಮಂಡ್ಯ ಜಿಲ್ಲೆಯ ರೈತರ ಕೃಷಿ ಉನ್ನನ್ನಗಳಿಗೆ ನ್ಯಾಯಯುತವಾದ ಬೆಲೆ ನೀಡಿಕೆ. ಕೃಷಿ ಕ್ಷೇತ್ರವೊಂದು ಉದ್ಯಮವೆಂದು ಪರಿಗಣಿಸುವ ಒತ್ತಾಯ, ಅವೈಜ್ಞಾನಿಕ ಸಾಲ ರದ್ದು, ಲೆವಿ ನಿರಾಕರಣೆ ಜೊತೆಗೆ ಕೆಲವು ಭ್ರಷ್ಟ ಅಧಿಕಾರಗಳಿಂದ ಲಂಚದ ಹಣವನ್ನು ರೈತರಿಗೆ ಪುನಃ ಹಿಂತಿರುಗಿಸಿದ ಪ್ರಕರಣಗಳು ಮಂಡ್ಯ ಜಿಲ್ಲೆಯಾದ್ಯಂತ ನಡೆದಿವೆ. ಕಾವೇರಿ ನೀರಿನ ಹೋರಾಟಗಳು ಹಾಗೂ ಸಕ್ಕರೆ ಕಾರ್ಖಾನೆ ನೀತಿಯ ವಿರುದ್ಧ ಹೋರಾಟ ಹಾಗೂ ಕಬ್ಬಿನ ಬೆಂಬಲ ಬೆಲೆ ಕೋರಿ ಹೋರಾಟ ಮತ್ತು ಮಂಡ್ಯ ಜಿಲ್ಲೆಯಲ್ಲಿ ಪ್ರಮುಖ ಹೋರಾಟದಲ್ಲಿ 'ಮೈಷುಗರ್ ಕಾರ್ಖಾನೆ ಉಳಿಸಿ' ಎಂಬ ಚಳುವಳಿ ಇಂದಿನ ಹಲವು ಚಳುವಳಿಗಳು, ಹೋರಾಟಗಳು ಮಂಡ್ಯ ನೆಲದಲ್ಲಿ ನಡೆದು ರೈತ ಚಳುವಳಿಯನ್ನು ಗಟ್ಟಿಗೊಳ್ಳುಸಿವೆ.

### ಇರ್ವಿನ್ ನಾಲಾ ರೈತರ ಬೆಂಗಳೂರು ಜಾಥಾ

ರೈತರಿಗಾಗುವ ತೊಂದರೆಗಳನ್ನು ಶಾಸನ ಸಭೆಯಲ್ಲಿ ಚರ್ಚಿಸಿದರೂ ಯಶಸ್ಸು ದೊರಕಿಲ್ಲ. ಈ ಆಜ್ಞೆ ರೈತರಿಗೆ ಮಾರಕವಾಗಿತ್ತು ಆದರೆ ಪ್ರಭುತ್ವದ ಎದುರು ಸಂಘಟಿತರಾಗಿ ಇದರ ವಿರುದ್ಧ ಹೋರಾಡುವ ಶಕ್ತಿ ರೈತ ಸಮುದಾಯಕ್ಕೆ ಇರಲಿಲ್ಲ. ಇದನ್ನು ಮನಗಂಡ ಇಂಡವಾಳು ಹೊನ್ನಯ್ಯರವರು ಹೆಚ್.ಕೆ. ವೀರಣ್ಣಗೌಡರಿಗೆ ರೈತರ ಸಂಕಷ್ಟ ವಿವರಿಸಿದರು. ವೀರಣ್ಣಗೌಡರು ಗೆಳೆಯರ ಭಾವನೆಗೆ ಸ್ಪಂದಿಸಿದರು. ಇರ್ವಿನ್ ನಾಲಾ ರೈತರ ಜಾಥಾ ಡಿಸೆಂಬರ್ 31, 1931 ರಂದು ಮದ್ದೂರಿನಿಂದ ಹೊರಟು ಜನವರಿ 4, 1932 ರಂದು ಮಧ್ಯಾಹ್ನ 12 ಗಂಟೆಗೆ ಬೆಂಗಳೂರು ಅಠಾರ ಕಛೇರಿಯನ್ನು ತಲುಪಿತು. ಅಠಾರ ಕಛೇರಿಯ ದಕ್ಷಿಣ ಭಾಗದ ಹುಲ್ಲಿನ ಮೈದಾನದ ವೇದಿಕೆಯ ಪೀಠಗಳ ಮೇಲೆ ದಿವಾನರು ಕೌನ್ಸಿಲರು, ಸರ್ಕಾರಿ ಕಾರ್ಯದರ್ಶಿಗಳು, ಇಲಾಖಾ ಮುಖ್ಯಾಧಿಕಾರಿಗಳು ಮುಂತಾದವರು ಆಸೀನರಾಗಿದ್ದರು. ದಿವಾನರೊಡನೆ ನಡೆದ ಚರ್ಚೆಯಲ್ಲಿ 'ಒಂದೇ ಬಾರಿಗೆ ಕಾಂಟ್ರಿಬ್ಯೂಷನ್ ಹಣ ಕೊಡಬೇಕು ಇದು ತಪ್ಪಿದರೆ ಶೇ6.25 ರಂತೆ ಬಡ್ಡಿ ಕೊಡಬೇಕೆಂಬ ಸರ್ಕಾರದ ಆದೇಶ ಸಾಧುವಲ್ಲ, ಕೈ ಮೇಲೆ ಕೊಡದ ಹಣಕ್ಕೆ ಹೀಗೆ ಬಡ್ಡಿ ಕೇಳುವುದು ಅನ್ಯಾಯವೆನಿಸುತ್ತದೆ. ರೈತರಿಗೆಂದು ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಅಣೆಕಟ್ಟು ಕಟ್ಟಿ ಕಾಲುವೆ ತೋಡಿ ಉಪಕಾರ ಮಾಡುವುದು ಸ್ವಾಗತಾರ್ಹ ಆದರೆ ಈ ಕಾರ್ಯದಿಂದ ರೈತರಿಗೆ ಇವರೆಗೆ ಯಾವ ಉತ್ಪತ್ತಿಯನ್ನು ಒದಗಿಸಿಲ್ಲ' ಎಂಬ ಅಂಶವನ್ನು ಮನದಟ್ಟು ಮಾಡಿದರು.

ಇರ್ವಿನ್ ನಾಲಾ ರೈತರ ಚಳುವಳಿಯಿಂದಾಗಿ ರೈತ ವರ್ಗದಲ್ಲಿ ವೈಚಾರಿಕ ಪ್ರಜ್ಞೆ, ಮುಂದಾಳತ್ವ, ಸಂಘಟನಾ ಪ್ರವೃತ್ತಿ ಹೆಚ್ಚಾಯಿತು. ಚಳುವಳಿಯ ಉದ್ದೇಶಕ್ಕೆ ರೈತರು ಸ್ಪಂದಿಸಿದ ರೀತಿ ಮೈಲಿಗಟ್ಟಲೆ ನಡೆದು ಹೋದ ದೈರ್ಯ ಮೆಚ್ಚುಗೆಗೆ ಪಾತ್ರವಾಯಿತು. ಮುಂದೆ ಅಸಹಾಯಕತೆಗೆ ತುತ್ತಾಗಿ ಕ್ರಮೇಣ ಸರ್ಕಾರದ ವ್ಯವಸ್ಥೆಗೆ ಅನಿವಾರ್ಯವಾಗಿ ತಲೆಬಾಗಿದರು. ಇರ್ವಿನ ನಾಲಾ ರೈತ ಚಳುವಳಿಯು ಸಂಘಟನಾತ್ಮಕ ಹೋರಾಟಕ್ಕೆ ಪ್ರಭುತ್ವದೆಂದು ನಾಂದಿ ಹಾಡಿದ ವರ್ತಮಾನದ ಮೊದಲ ಉದಾಹರಣೆಯಾಗಿತ್ತಲ್ಲದೆ, ಸ್ವಾತಂತ್ರ್ಯ ಪೂರ್ವದ ಮೈಸೂರು ಸಂಸ್ಥಾನದ ಒಂದು ಮುಖ್ಯವಾದ ಶಿಸ್ತಿನ ರೈತ ಚಳುವಳಿಯಾಗಿದೆ.

### ಇರ್ವಿನ್ ನಾಲಾ ಚಳುವಳಿ (1931–32)

1931–32ರಲ್ಲಿ ಮಂಡ್ಯ ಇರ್ವಿನ್ ನಾಲಾ ರೈತ ಚಳುವಳಿಯು ಕೃಷಿ ನೀತಿಯ ವಿರುದ್ಧವಾಗಿ ಜರುಗಿದ ಬಹು ಮುಖ್ಯವಾದ ಆಂದೋಲನ. ಬ್ರಿಟಿಷ್ ಆಳ್ವಿಕೆಗೆ ವಿರುದ್ಧವಾಗಿ ಹೋರಾಟಕ್ಕೆ ನಿಂತ ಜನರ ವರ್ಗದಲ್ಲಿ ರೈತರು ಪ್ರಮುಖರು. ಜಮೀನು ಸಂಬಂಧವಾಗಿ

ಜಾರಿಗೆ ಬಂದ ಹೊಸ ಕಾಯ್ದೆಗಳು ರೈತರನ್ನು ಗೊಂದಲಕ್ಕೀಡು ಮಾಡಿತು. ರೈತನೇ ಹೊಲದ ಒಡೆಯನಾಗಿದ್ದ ರೈತವಾರಿ ಪ್ರದೇಶಗಳಲ್ಲಿ ಮಿತಿಮೀರಿದ ಕಂದಾಯದ ಹೊರೆ, ನೀರಿನ ತೆರಿಗೆಯ ಏರಿಕೆ, ಕಡ್ಡಾಯ ಕಂದಾಯ ವಸೂಲಿಯಂತಹ ಸಮಸ್ಯೆಗಳು ರೈತರಿಗೆ ಎದುರಾದವು. ಈಗಿನ ವಿಶ್ವೇಶ್ವರಯ್ಯ ನಾಲೆಯನ್ನು 1930ರಲ್ಲಿ ಇರ್ವಿನ್ ನಾಲಾ ಎಂದು ಕರೆಯಲಾಗುತ್ತಿತ್ತು.

ಕೃಷ್ಣರಾಜಸಾಗರ(ಕನ್ನಂಬಾಡಿ)ದಿಂದ ಹೊರಡುವ ಕಾವೇರಿ ಶಾಖೆ ಶಿಂಷಾ ಶಾಖೆಗಳ ರೈತರು ಅನುಸರಿಸಬೇಕಾದ ವ್ಯವಸಾಯ ಕ್ರಮ, ನೀರಾವರಿಯ ಜಮೀನುಗಳಿಗೆ ಅವರು ಕೊಡಬೇಕಾಗಿರುವ ಕಂದಾಯ, ಕಾಂಟ್ರಿಬ್ಯೂಷನ್ (ಸಹಾಯಧನ) ಹಣ ಕೊಡುವುದು ತಡವಾದರೆ ಅದಕ್ಕೆ ಕೊಡಬೇಕಾಗಿರುವ ಬಡ್ಡಿ ಇತ್ಯಾದಿ ವಿಷಯ ಕುರಿತು ಮೈಸೂರು ಸರ್ಕಾರ ಹೊರಡಿಸಿದ ಆಜ್ಞೆಯು ರೈತರಿಗೆ ಮಾರಕವಾಯಿತು. ಇದನ್ನು ವಿರೋಧಿಸಿ ಹೆಚ್.ಕೆ.ವೀರಣ್ಣಗೌಡ, ಇಂಡುವಾಳು ಹೊನ್ನಯ್ಯ ಮತ್ತು ಹೊನ್ನಾನಾಯಕನಹಳ್ಳಿ ಹೆಚ್.ಕೆ. ಪುಟ್ಟಣ್ಣನವರ ನೇತೃತ್ವದಲ್ಲಿ ಈ ಚಳುವಳಿ ನಡೆಯಿತು.

**ಮಂಡ್ಯ ಜಿಲ್ಲೆಯಲ್ಲಿ ಮೈಸೂರು ಚಲೋ ಚಳುವಳಿ**

ಕರ್ನಾಟಕದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ಕರೆಯ ಸೀಮೆ ಎಂಬ ಅಭಿಧಾನಕ್ಕೆ ಹೆಸರಾಗಿರುವ ಮಂಡ್ಯ ಜಿಲ್ಲೆಯು ವಹಿಸಿದ ಪಾತ್ರ ಅವಿಸ್ಮರಣೀಯ. ಜಿಲ್ಲೆಯ ಬಹುತೇಕ ನಾಯಕರು ರಾಷ್ಟ್ರೀಯ ಕಾಂಗ್ರೆಸ್ ಹಾಗೂ ಮಹಾತ್ಮ ಗಾಂಧೀಜಿಯವರ ಪ್ರಭಾವಕ್ಕೊಳಗಾಗಿ ಹೋರಾಟದಲ್ಲಿ ಪಾಲ್ಗೊಂಡರು. ಸ್ವಾತಂತ್ರ್ಯ ಹೋರಾಟಗಾರರಾದ ಹೆಚ್.ಕೆ.ವೀರಣ್ಣಗೌಡ, ಕೆ.ಟಿ. ಶಂಕರೇಗೌಡ, ಡಿ.ವಿದ್ಯಾದರಪ್ಪ, ಪಿ.ಎನ್.ಜವರಪ್ಪಗೌಡ, ಹೆಚ್.ಹೊನ್ನಯ್ಯ, ಎ.ಜಿ.ಬಂದೀಗೌಡ ಅನಂತರಾಮಶೆಟ್ಟಿ, ಜಿ.ಎಸ್. ಬೋಮ್ಮಯ್ಯ, ಕೆ. ಬೆಟ್ಟಶೆಟ್ಟಿ ಮೊದಲಾದವರು ಈ ಚಳುವಳಿಯಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಪಾಲ್ಗೊಂಡು ಮೈಸೂರು ಸಂಸ್ಥಾನದಲ್ಲಿ ಪ್ರಜಾ ಸರ್ಕಾರದ ಸ್ಥಾಪನೆಗೆ ಕಾರಣರಾದರು.

**ಮೈಸೂರು ಚಲೋ ಚಳುವಳಿಯ ಪ್ರಮುಖ ಬೇಡಿಕೆಗಳು**

- ಮೈಸೂರು ಸಂಸ್ಥಾನದಲ್ಲಿ ಕೂಡಲೇ ಜವಾಬ್ದಾರಿಯುತ ಸರ್ಕಾರದ ಸ್ಥಾಪನೆಯಾಗಬೇಕು.
- ಚುನಾಯಿತ ಪ್ರತಿನಿಧಿಗಳಿಂದ ಕೂಡಿದ ರಾಜ್ಯಾಂಗ ರಚನಾಸಭೆ ರಚನೆಯಾಗುವವರೆಗೆ ತಾತ್ಕಾಲಿಕ ಸರ್ಕಾರ ಸ್ಥಾಪನೆ.
- ಮೈಸೂರು ಕಾಂಗ್ರೆಸ್ಸನ್ನು ಒಂದು ರಾಜಕೀಯ ಪಕ್ಷದೆಂದು ಮನ್ನಣೆ ನೀಡಬೇಕು.
- ಬಂಧಿತರಾಗಿರುವ ಎಲ್ಲಾ ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಬೇಕು.

ಈ ಮೇಲ್ಕಂಡ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಮೈಸೂರು ಕಾಂಗ್ರೆಸ್ ಮೈಸೂರು ಚಲೋ ಘೋಷಿಸಿತು ಈ ಚಳುವಳಿಯು ಮಂಡ್ಯ ಜಿಲ್ಲೆಯ ರೈತ ಹೋರಾಟಗಾರಿಗೆ ಸ್ಪೂರ್ತಿ ತುಂಬಿತು.

**ಚಡ್ಡಿ ಮೆರವಣಿಗೆ**

ವರುಣಾ ನಾಲಾ ವಿರೋಧಿ ಹೋರಾಟ ಸಮಿತಿಯು ಚಳುವಳಿಯನ್ನು ತೀವ್ರಗೊಳಿಸುವ ದೃಷ್ಟಿಯಿಂದ ಅಕ್ಟೋಬರ್ 24, 1977 ರಂದು ಜಿಲ್ಲಾ ಮತ್ತು ತಾಲೂಕು ಕಛೇರಿಗಳ ಎದುರು ಧರಣಿ ಸತ್ಯಾಗ್ರಹ ನಡೆಸಿತು. ಈ ಮೆರವಣಿಗೆಯಲ್ಲಿ 10,000 ರೈತರು ಭಾಗವಹಿಸಿದ್ದರು. ಅಕ್ಟೋಬರ್ 27, 1977 ರಂದು ವರುಣಾ ನಾಲಾ ವಿರುದ್ಧ 3 ಲಕ್ಷಕ್ಕೂ ಹೆಚ್ಚು ಮಂದಿ ಭಾಗವಹಿಸಿ ಮಂಡ್ಯದಲ್ಲಿ ಬೃಹತ್ ಚಳುವಳಿಯನ್ನು ನಡೆಸಿದರು. ಶಂಕರೇಗೌಡರು ಚಳುವಳಿಯಲ್ಲಿ ಅಗ್ರಮಾನ್ಯ ವ್ಯಕ್ತಿಯಾಗಿದ್ದರು. ಅಂದು ನಡೆದ ಚಳುವಳಿಯಲ್ಲಿ ಎಲ್ಲರೂ ಚಡ್ಡಿಯನ್ನು ಧರಿಸಿದ್ದರು. ಈ ವಿಶಿಷ್ಟವಾದ ಚಳುವಳಿಯು "ಚಡ್ಡಿ ಮೆರವಣಿಗೆ" ಎಂದೇ ಗಮನ ಸೆಳೆಯಿತು. ಸಮಿತಿಯ ತೀರ್ಮಾನದಂತೆ ನವೆಂಬರ್ 24, 1977 ರಂದು

"ಬೆಂಗಳೂರು ಚಲೋ" ಪ್ರತಿಭಟನೆಯ ಅಂಗವಾಗಿ ಸಹಸ್ರಗಟ್ಟಲೆಯಲ್ಲಿ ಮಂಡ್ಯ ಜಿಲ್ಲೆಯ ರೈತರು ಬೆಂಗಳೂರಿನಲ್ಲಿ ಜಾಥಾ ನಡೆಸಿದರು. ಈ ಬೃಹತ್ ಜಾಥಾ ವಿಧಾನಸೌಧದ ಮುಂದೆ ಜಮಾಯಿಸಿತು. ಮಂಡ್ಯ ನಗರದಿಂದ 400 ಕ್ಕೂ ಹೆಚ್ಚು ಲಾರಿ, ಬಸ್ಸು ಹಾಗೂ 200ಕ್ಕೂ ಹೆಚ್ಚು ಸ್ಕೂಟರ್‌ಗಳಲ್ಲಿ ಜನರು ಭಾಗವಹಿಸಿದ್ದರು. ಕೆ.ವಿ.ಶಂಕರೇಗೌಡರ ಒತ್ತಾಯಕ್ಕೆ ಮಣಿದ ಅಂದಿನ ಅರಸು ಸರ್ಕಾರ ತಜ್ಞರು ಸಮಿತಿಯೊಂದನ್ನು ನೇಮಿಸಿತು. ಅದರಂತೆ ಮಂಡ್ಯ ಜಿಲ್ಲೆಯ ಪ್ರದೇಶಕ್ಕೆ ನೀರು ಸರಬರಾಜು ಮಾಡಲು ಆದ್ಯತೆ ಕೊಡಲು ಶಾಸನಬದ್ಧ ಒಪ್ಪಂದ ಮಾಡಿಕೊಂಡರು. ಈ ಒಪ್ಪಂದದ ಮೇರೆಗೆ ಮಾರ್ಚ್ 27, 1979 ರಂದು ಕರ್ನಾಟಕ ಸರ್ಕಾರ ವರುಣಾ ನಾಲಾ ಸಂಬಂಧ ಒಂದು ಆದೇಶವನ್ನು ಹೊರಡಿಸಿತು. ಸಮಗ್ರ ರೈತವರ್ಗದ ಮಿತ್ರರಾದ ಶಂಕರೇಗೌಡರು ವಿಶಾಲ ಹೃದಯಿಗಳಾಗಿದ್ದರು. ಅವರು ವರುಣಾ ನಾಲಾ ಚಳುವಳಿಯ ಕೇಂದ್ರಬಿಂದುವಾಗಿದ್ದರು. ಈ ಚಳುವಳಿ ಜಿಲ್ಲೆಯ ರೈತರಿಗೆ ಆಗುತ್ತಿದ್ದ ಅನ್ಯಾಯವನ್ನು ತಡೆಗಟ್ಟುವಲ್ಲಿ ಯಶಸ್ವಿಯಾಯಿತು.

**ಕಬ್ಬಿನ ಬೆಲೆ ನಿಗದಿ ಮತ್ತು ರೈತರ ಪ್ರತಿಭಟನೆ–2000**

ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಕೆ.ಎಂ. ದೊಡ್ಡಿ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿಯು ರೈತರು ಬೆಳೆದ ಕಬ್ಬು ಖರೀದಿಸಿ ಸರಿಯಾದ ಸಮಯಕ್ಕೆ ಹಣ ಪಾವತಿ ಮಾಡದ ಕಾರಣಕ್ಕೆ ಕೆ.ಎಂ ದೊಡ್ಡಿ ಸಕ್ಕರೆ ಕಾರ್ಖಾನೆಯ ಮುಂಬಾಗ 30 ದಿನಗಳ ಕಾಲ ರೈತರು ಪ್ರತಿಭಟನೆಯನ್ನು ಕೈಗೊಂಡಿದ್ದರು. ಆದರೂ ರೈತರ ಸಮಸ್ಯೆ ಬಗೆಹರಿಯಲಿಲ್ಲ. ಆಗ ಮದ್ದೂರಿನ ಟಿ.ಬಿ. ಸರ್ಕಲ್‌ನಲ್ಲಿ ಪ್ರತಿಭಟನೆಯನ್ನು ಆರಂಭಿಸಿ ಮುಖ್ಯಮಂತ್ರಿ ಮನೆಯ ಮುಂದೆ ಪ್ರತಿಭಟನೆ ಮಾಡಲು ಐವತ್ತು ಲಾರಿಗಳಲ್ಲಿ ಹೊರಟಿದ್ದ ರೈತರು ಹಾಗೂ ಮುಖಂಡರನ್ನು ಬಂಧಿಸಲಾಯಿತು. ನಂತರ ಐದು ಸಾವಿರಕ್ಕೂ ಹೆಚ್ಚು ರೈತರು ರಸ್ತೆ ತಡೆ ಚಳುವಳಿಯನ್ನು ನಡೆಸಿದರು. ನಂತರ ಸ್ಥಳಕ್ಕೆ ಬಂದ ಜಿಲ್ಲಾಧಿಕಾರಿಗಳು ರೈತ ಮುಖಂಡರು ಹಾಗೂ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿಯ ಸಭೆ ಕರೆದು ಸಮಸ್ಯೆ ಬಗೆಹರಿಸುವ ಬಗ್ಗೆ ರಾಜ್ಯ ರೈತಸಂಘದ ಅಧ್ಯಕ್ಷರಾಗಿದ್ದ ಶ್ರೀ.ಕೆ.ಎಸ್.ಪುಟ್ಟಣ್ಣಯ್ಯ ಅವರಿಗೆ ಭರವಸೆ ನೀಡಿದರು. ರೈತರ ಸಮಸ್ಯೆ ಒಂದೆರಡು ದಿನಗಳಲ್ಲಿ ಇತ್ಯರ್ಥವಾಗದಿದ್ದರೆ ಜಿಲ್ಲೆಯಾದ್ಯಂತ ರೋಕೋ ಚಳುವಳಿ ನಡೆಸುವುದಾಗಿ ತಿಳಿಸಿ ರಸ್ತೆತಡೆಯನ್ನು ಹಿಂತೆಗೆದುಕೊಂಡರು.

ರೈತರ ಈ ಪ್ರತಿಭಟನೆಯಿಂದಾಗಿ ಅಂದಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರವರು ಸಕ್ಕರೆ ಸಚಿವ ಕೃಷ್ಣಪ್ಪರವರೊಂದಿಗೆ ಚರ್ಚಿಸಿ ಕಬ್ಬಿನ ಬೆಲೆ ನಿಗದಿಪಡಿಸುವ ನಿರ್ಧಾರ ಕೈಗೊಂಡರು. ನಂತರದ ದಿನಗಳಲ್ಲಿ 2000–2001ನೇ ಸಾಲಿನಲ್ಲಿ ಕೈಗಾರಿಕಾ ಸಚಿವರು, ಶಾಸಕರು, ಸಂಸತ್ ಸದಸ್ಯರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ರೈತ ಪ್ರತಿನಿಧಿಗಳ ಸಭೆ ಕರೆದು ಚರ್ಚಿಸಿ ಪ್ರತಿ ಟನ್ ಕಬ್ಬಿಗೆ 880 ರೂಗಳನ್ನು ರಾಜ್ಯ ಸರ್ಕಾರ ನಿಗದಿ ಮಾಡಿತು.

**ಮಂಡ್ಯದಲ್ಲಿ ಕಬ್ಬು ಬೆಳೆಗಾರರ ಮುಷ್ಕರ**

ಕಬ್ಬು ಬೆಳೆಗಾರರು ತಮ್ಮ ಬೇಡಿಕೆಗಳ ಹಿಡೇರಿಕೆಗಾಗಿ ಕೆ.ವಿ ಶಂಕರೇಗೌಡರ ಅಧ್ಯಕ್ಷತೆಯಲ್ಲಿ ಅಕ್ಟೋಬರ್ 17, 1960ರಿಂದ ಕಾರ್ಖಾನೆಯ ಆವರಣದಲ್ಲಿ ಮುಷ್ಕರ ನಡೆಸಿದರು. ಇದರ ಪರಿಣಾಮವಾಗಿ ಕಬ್ಬು ತುಂಬಿದ್ದ 2000ಕ್ಕೂ ಹೆಚ್ಚು ಗಾಡಿಗಳು ಮಂಡ್ಯ ಸಕ್ಕರೆ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡದೆ ಹಾಗೆಯೇ ನಿಂತಿದ್ದವು. ಬೋನಾಸ್ ಮತ್ತು ಕಬ್ಬಿಗೆ ಹೆಚ್ಚಿನ ಬೆಲೆ ನಿಗಧಿ, ರಿಯಾಯಿತಿ ದರದಲ್ಲಿ ರಾಸಾಯನಿಕ ಗೊಬ್ಬರ ಸರಬರಾಜು ಮುಂತಾದ ಬೇಡಿಕೆಗಳನ್ನು ಈಡೇರಿಸುವಂತೆ ಈ ಹೋರಾಟ ನಡೆಸಲಾಯಿತು. ಇದರ ಪರಿಣಾಮವಾಗಿ ಮಂಡ್ಯ ಸಕ್ಕರೆ ಕಾರ್ಖಾನೆಯು ರೈತರಿಗೆ ಕೊಡಬೇಕಾದ ಬೋನಾಸ್ ಕೊಟ್ಟು ಹಾಗೂ ಕಬ್ಬಿನ ಬೆಲೆಯನ್ನು ಹೆಚ್ಚಿಸಲು ಒಪ್ಪಿಕೊಂಡಿತು.

**ಮಂಡ್ಯ ಜಿಲ್ಲೆ ಗೆಜ್ಜಲಗೆರೆ ರೈತರ ಸತ್ಯಾಗ್ರಹ ಮತ್ತು ಗೋಲಿಬಾರ್**

ಈ ಚಳುವಳಿಯು ನವೆಂಬರ್ 23, 1982 ಮಂಡ್ಯ ಜಿಲ್ಲೆಯ ರೈತರ ಹೋರಾಟಗಳಲ್ಲಿ ಬಹು ಮುಖ್ಯವಾದ ಚಳುವಳಿ. ಏಕೆಂದರೆ ಈ ಚಳುವಳಿಯು ಪ್ರಮುಖವಾಗಿ ಕಬ್ಬು ಹಾಗೂ ಭತ್ತಕ್ಕೆ ಸೂಕ್ತ ಬೆಲೆಯನ್ನು ನೀಡಬೇಕೆಂಬ ಬೇಡಿಕೆಯನ್ನಿಟ್ಟಿತ್ತು. ಆದರೆ ಇದಕ್ಕೆ ಪೂರಕವಾಗಿ ಗೆಜ್ಜಲಗೆರೆಯಲ್ಲಿ ನಡೆದ ಒಪ್ಪಂದದಲ್ಲಿ ನಿಗದಿಪಡಿಸಿದ ಬೆಲೆಯನ್ನು ಒಪ್ಪಿದ ಮತ್ತು ಒಪ್ಪದಿದ್ದ ರೈತರ ಎರಡು ಬಣಗಳಾದವು. ಈ ಮುಷ್ಕರದಲ್ಲಿ ಅನೇಕ ರೈತರನ್ನು ಬಂಧಿಸಲಾಯಿತು. ಇದರಿಂದ ಚಳುವಳಿ ತೀವ್ರಗೊಂಡು ಕಲ್ಲು ತೂರಾಟ, ಪೋಲಿಸರ ವಾಹನಕ್ಕೆ ಬೆಂಕಿ ಹಚ್ಚುವ ಪ್ರಯತ್ನ ನಡೆಯಿತು. ಗಲಭೆ ನಿಯಂತ್ರಿಸಲು ಪೋಲಿಸರು ಗೋಲಿಬಾರ್ ನಡೆಸಿದರು. ಇದರಿಂದ ಇಬ್ಬರು ರೈತರು ಪ್ರಾಣ ತೆತ್ತರು ಹಾಗೂ ಅನೇಕರು ಗಾಯಗೊಂಡು ಆಸ್ಪತ್ರೆ ಸೇರಿದರು. ಮಂಡ್ಯ ಕಂಡ ಒಂದು ಘೋರ ದುರಂತದ ಚಳುವಳಿ ಇದಾಗಿತ್ತು.

**ಉಪಸಂಹಾರ**

ಒಟ್ಟಾರೆಯಾಗಿ ಮಂಡ್ಯ ಜಿಲ್ಲೆಯಲ್ಲಿ ನಡೆದ ಅನೇಕ ರೀತಿಯ ಹೋರಾಟ ಮತ್ತು ಚಳುವಳಿಗಳು ನಡೆದಿದ್ದರೂ ರೈತರ ಬದುಕು ನಿರೀಕ್ಷಿಸಿದ ಪ್ರಮಾಣದಲ್ಲಿ ಸುಧಾರಿಸಿಲ್ಲ. ಇಂದಿಗೂ ಕೂಡ ರೈತರ ಹೋರಾಟಗಳು ನಡೆಯುತ್ತಿವೆ. ಮಂಡ್ಯ ಜಿಲ್ಲೆಯಲ್ಲಿ ಈ ರೀತಿಯ ಚಳುವಳಿಗಳು ನಡೆದರೂ ಕೂಡ ರೈತರಿಗೆ ಸರಿಯಾದ ಸಮಯಕ್ಕೆ ನೀರಾವರಿ ಸೌಲಭ್ಯ ಹಾಗೂ ರಸಗೊಬ್ಬರ ಮತ್ತು ಕೃಷಿ ಸಂಬಂಧಿತ ವಸ್ತುಗಳ ಪೂರೈಕೆ ಮಾಡುವಲ್ಲಿ ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುತ್ತಿಲ್ಲ. ಇವು ರೈತರ ನೋವುಗಳ ಅಭಿವ್ಯಕ್ತಿಗಳಾಗಿವೆ. ಈ ಹೋರಾಟಗಳಿಗೆ ಸರ್ಕಾರ ಸ್ಪಂದಿಸುತ್ತಿದ್ದರೂ ಸಹ ನಿರೀಕ್ಷೆಯ ಮಟ್ಟದಲ್ಲಿ ಫಲಿತಾಂಶ ದೊರಕುತ್ತಿಲ್ಲ. ಇದು ಪ್ರಮುಖವಾಗಿ ಮಂಡ್ಯ ಜಿಲ್ಲೆಯ ರೈತ ಚಳುವಳಿಗಳು ಮತ್ತು ಹೋರಾಟಗಳಿಗೆ ನಿರಂತರವಾಗಿ ಜಿಲ್ಲೆಯಲ್ಲಿ ನಡೆಯಲು ಕಾರಣವಾಗಿದೆ.

**ಪರಾಮರ್ಶನ ಗ್ರಂಥಗಳು**


- ಅರ್ಜುನ್ ಹಳ್ಳಿ ಪ್ರಸನ್ನ ಕುಮಾರ್. (2019). *ಕಾವೇರಿ ಕಣಿವೆಗೆ ನೇಣು.* ಸಂವಹನ.
- ಬಯ್ಯರೆಡ್ಡಿ ಜೆ.ಸಿ. ಮತ್ತು ಯು. ಬಸವರಾಜು. (2020). *ರೈತ ಸಂಕುಲ ನಾಶ ಮಾಡುವ ಕೃಷಿ ಮಸೂದೆಗಳು.* ಕರ್ನಾಟಕ ಪ್ರಾಂತ ರೈತಸಂಘ.
- ಚಂದ್ರಪ್ಪ, ಸಿ. (2012). *ರೈತ ಮತ್ತು ಆದಿವಾಸಿ ಚಳುವಳಿ.* ಮನೋಜ್ ಪಬ್ಲಿಕೇಷನ್.
- ಕುಮಾರ್, ಕೆ.ಎಂ. (2008). *ಕರ್ನಾಟಕದಲ್ಲಿ ರೈತ ಚಳುವಳಿ.* ಕನ್ನಡ ಸಾಹಿತ್ಯ ಪರಿಷತ್.
- ಮುಜಾಫರ್ ಅಸ್ಸಾದಿ. (2009). *ಕರ್ನಾಟಕದಲ್ಲಿ ಐಡೆಂಟಿಟಿ ರಾಜಕೀಯ, ರೈತ, ರೈತ ಹೋರಾಟ ಹಾಗೂ ಸಾಮಾಜಿಕ ಚಳುವಳಿ.* ಕೆ.ಎನ್.ಮುದ್ದಪ್ಪ ಸ್ಮಾರಕ ಟ್ರಸ್ಟ್.
- ನಾಗರಾಜು, ಎನ್.ಜಿ. (2006). *ಕರ್ನಾಟಕ ರೈತ ಚಳುವಳಿ–ಸತ್ಯಾಗ್ರಹಗಳು.* ಕರ್ನಾಟಕದ ವಿಧಾನಮಂಡಲ ಗ್ರಂಥಾಲಯ ಸಮಿತಿ.